## ಕ್ಯಾನ್ಸರ್ ಪತ್ತೆಗೆ ಸುಲಭ ಪರೀಕ್ಷೆ

ಕ್ಯಾನ್ಸರನ್ನು ಆರಂಭಿಕ ಹಂತದಲ್ಲಿಯೇ ಗುರುತಿಸಲು ಅನುಕೂಲವಾಗುವಂತೆ ಹೊಸ ಪರೀಕ್ಷೆಯೊಂದನ್ನು ಸಂಶೋಧಕರು ಕಂಡುಹಿಡಿದಿದ್ದಾರೆ. ರಕ್ತದ ಸರಳ ಪರೀಕ್ಷೆಯ ಮೂಲಕವೇ ಕ್ಯಾನ್ಸರ್ ಬೆಳೆಯುವ ಸಾಧ್ಯತೆಯನ್ನು ಗುರುತಿಸಬಹುದು ಎಂದು ಅವರು ಹೇಳಿದ್ದಾರೆ.

ರಕ್ತ ಪರೀಕ್ಷೆಯನ್ನು 'ಲಿಂಪೋಸೈಟ್ ಜಿನೋಮ್ ಸೆನ್ಸಿಟಿವಿಟಿ' (LGS) ಎಂದು ಹೆಸರಿಸಿದ್ದಾರೆ. ಇದರಿಂದ ಕ್ಯಾನ್ಸರ್‌ನ ಯಾವುದೇ ಲಕ್ಷಣಗಳು ಇಲ್ಲದಿದ್ದರೂ ಮುಂದೆ ಬರಬಹುದಾದ ಸಾಧ್ಯತೆಯನ್ನು ಪತ್ತೆಮಾಡಬಹುದು. ಭವಿಷ್ಯತ್ತಿನಲ್ಲಿ ಇದು ಅಸಂಖ್ಯಾತರನ್ನು ಸಾವಿನ ದವಡೆಯಿಂದ ತಪ್ಪಿಸಲು ನೆರವಾಗುತ್ತದೆ ಎಂದು ತಜ್ಞರು ಆಶಾಭಾವನೆಯನ್ನು ವ್ಯಕ್ತಪಡಿಸಿದ್ದಾರೆ.

## ಧೂಮಪಾನದಿಂದ ಸಂತಾನ ಹೀನತೆ

ಧೂಮಪಾನ ಮಾಡುವ ತಾಯಿಯ ಮಕ್ಕಳಿಗೆ ಸಂತಾನ ಭಾಗ್ಯ ಇಲ್ಲದಂತಾಗುತ್ತದೆ ಎಂಬ ಆತಂಕದ ವಿಷಯ ಸಂಶೋಧಕರ ಹೊಸ ಅಧ್ಯಯನದಿಂದ ತಿಳಿದುಬಂದಿದೆ.

ಗರ್ಭವತಿ ಅಥವಾ ಹಾಲೂಡಿಸುವ ತಾಯಿ ಧೂಮ ವ್ಯಸನಿಯಾಗಿದ್ದರೆ, ಆಕೆಯ ಗಂಡುಮಗು ಸಂತಾನಹೀನತೆಯನ್ನು ಅನುಭವಿಸಬೇಕಾಗುತ್ತದೆ ಎಂದಿರುವ ಸಂಶೋಧಕರು, ಇಲಿಗಳ ಮೇಲೆ ತಾವು ನಡೆಸಿದ ಪ್ರಯೋಗ ಕೂಡ ಇದನ್ನು ದೃಢಪಡಿಸಿದೆ ಎಂದು ಹೇಳಿದ್ದಾರೆ.

ತಂಬಾಕಿನ ಸೋಂಕಿರುವ ಗಂಡಿನ ವೀರ್ಯಗಳು ಆಕಾರದಲ್ಲಿ ವಿರೂಪಗೊಳ್ಳುತ್ತವೆ. ಅವು ತಮ್ಮ ಸಾಮರ್ಥ್ಯವನ್ನೂ ಕಳೆದುಕೊಳ್ಳುವ ಸಾಧ್ಯತೆ ಹೆಚ್ಚಿರುವುದರಿಂದ ಅಂಡಾಣುವನ್ನು ಸೇರುವಲ್ಲಿ ವಿಫಲವಾಗುತ್ತವೆ ಎಂದು ತಜ್ಞರು ವಾದಿಸಿದ್ದಾರೆ.

## ದೃಷ್ಟಿ ಕಳೆಯುವ ವಯಾಗ್ರ

ವಯಾಗ್ರ ದೃಷ್ಟಿಯನ್ನು ಕಿತ್ತುಕೊಳ್ಳುವ ಸಾಧ್ಯತೆಯಿದೆ ಎಂಬ ಎಚ್ಚರಿಕೆಯನ್ನು ಆಸ್ಟ್ರೇಲಿಯಾದ ಸಂಶೋಧಕರು ನೀಡಿದ್ದಾರೆ.

ವಯಾಗ್ರದಲ್ಲಿ ಪುರುಷತ್ವ ಕೆರಳಿಸುವ ಕೆಲವು ರಾಸಾಯನಿಕಗಳನ್ನು ಬಳಸಲಾಗಿದೆ. ಇದು ಕಣ್ಣಿಗೆ ಅಪಾಯವನ್ನು ಉಂಟುಮಾಡುವ ಸಾಧ್ಯತೆಯಿದೆ. ಇದರ ಪರಿಣಾಮ ದೀರ್ಘಕಾಲ ಉಳಿಯುವ ಸಾಧ್ಯತೆಯಿದ್ದು ದೃಷ್ಟಿ ದೋಷ ಉಂಟಾಗಬಹುದು ಎಂದು ಸಂಶೋಧಕರು ಹೇಳಿದ್ದಾರೆ.

ವಯಾಗ್ರವನ್ನು ಲೆಕ್ಕತಪ್ಪಿ ಸೇವಿಸಿದರೆ ಅದರಲ್ಲಿರುವ ರಾಸಾಯನಿಕಗಳು ರೆಟಿನಾ ಹಾಗೂ ಮೆದುಳಿನ ನಡುವೆ ಬೆಳಕಿನ ಸಂಜ್ಞೆಯನ್ನು ನೀಡುವ ಸೂಕ್ಷ್ಮ ಕ್ರಿಯೆಯನ್ನು ನಾಶ ಮಾಡುವುದರಿಂದ ಶಾಶ್ವತವಾಗಿ ದೃಷ್ಟಿ ದೋಷ ಉಂಟಾಗುತ್ತದೆ. ಕೆಲವರಿಗೆ ಬಣ್ಣಗುರುಡುತನ ಬರುತ್ತದೆ ಎಂದು ಸಂಶೋಧಕರು ಹೇಳಿದ್ದಾರೆ.

## ನಡೆಯಲು ಒಳದಾರಿ!

ಬಿರುಸಿನ ನಡಿಗೆಗೆ ಅನುಕೂಲವಾಗಲು ಸರಳ ಸೂತ್ರವೊಂದನ್ನು ಸಂಶೋಧಕರು ಕಂಡುಹಿಡಿದಿದ್ದಾರೆ. ನಡಿಗೆಗೂ ಮುನ್ನ ನಿರ್ದಿಷ್ಟ ಕೇಂದ್ರವನ್ನು ಗುರುತಿಸಿಕೊಂಡು, ಅದನ್ನು ತಲುಪಲು ಸಾಗಿದರೆ ಗುರಿ ಮುಟ್ಟಲು ವೇಗದಿಂದ ಕ್ರಮಿಸುತ್ತಾರೆ ಎನ್ನುವುದನ್ನು ಅವರು ಗುರುತಿಸಿದ್ದಾರೆ.

ಮನುಷ್ಯ ದೈಹಿಕ ಶ್ರಮ ಹಾಕಲು ಹಿಂಜರಿಯುತ್ತಾನೆ. ಅವನ ಮನಸ್ಸಿಗೆ ಚೈತನ್ಯ ತುಂಬಲು ಕಣ್ಣಿಗೆ ಕಾಣುವ ಯಾವುದೋ ಒಂದು ಮರ, ಕಟ್ಟಡವನ್ನು ಗುರುತಿಸಿಕೊಂಡರೆ, ಅದು ಮಾನಸಿಕವಾಗಿ ಹತ್ತಿರವಾಗಿರುತ್ತದೆ. ಅದರಿಂದ ನಡಿಗೆ ಪರಿಣಾಮಕಾರಿಯಾಗಿರುತ್ತದೆ ಎಂದು ಅವರು ಅಭಿಪ್ರಾಯಪಟ್ಟಿದ್ದಾರೆ.

–ಟಿಪ್ಸ್

---

## ಸಮುದ್ರ ಮಥನ

### ಚಿತ್ತಾಕರ್ಷಕ ಮುಖಪುಟ




'ಕೊಡಗಿನ ಹಕ್ಕಿಗಳು' ಮುಖಪುಟ ಲೇಖನ (ಸುಧಾ ಅ. 2) ದಲ್ಲಿ ಲೇಖಕ ಎ. ಶಿವಪ್ರಕಾಶ್ ಕೊಡಗಿನ ಪ್ರಕೃತಿ ಸೌಂದರ್ಯವನ್ನು ಸುಂದರವಾಗಿ ವರ್ಣಿಸಿದ್ದಾರೆ. ಪಕ್ಷಿ ಹಾಗೂ ಚಿಟ್ಟೆಗಳ ವರ್ಣಮಯ ಚಿತ್ರಗಳು ಚಿತ್ತಾಕರ್ಷಕವಾಗಿವೆ.

–ಸು. ವಿಜಯಲಕ್ಷ್ಮಿ, ಶಿವಮೊಗ್ಗ, ಅಮೃತಾ ಕುಂದಾಪುರ, ಎಸ್. ಲಕ್ಷ್ಮೀನರಸಿಂಹ, ಚಾಮರಾಜನಗರ, ನಿತ್ಯ ಎಸ್. ಮೂಡಬಿದಿರೆ, ಎಂ. ಮೃತ್ಯುಂಜಯಪ್ಪ

### ಮನಸೂರೆಗೊಂಡಿತು

'ಕೊಡಗಿನ ಹಕ್ಕಿಗಳು' ಲೇಖನ ಸೊಗಸಾಗಿತ್ತು. ಕೊಡಗಿನ ಸೌಂದರ್ಯ ಸನ್ನಿವೇಶ, ಅಲ್ಲಿಯ ಹಕ್ಕಿ ಹಾಗೂ ಪಾತರಗಿತ್ತಿಯ ಚಿತ್ರ ಸೊಗಸಾಗಿ ಮನಸೂರೆಗೊಳ್ಳುವಂತಿತ್ತು.

–ಮೇ.ಗೋ. ಸುಬ್ಬಣ್ಣ, ಮೇಗರವಳ್ಳಿ

### ಸಹಜ ಅಲಂಕಾರ

ಮುಖಪುಟಕ್ಕೆ ವರ್ಣಮಯವಾದ ಹಕ್ಕಿಯ ಚಿತ್ರ ಸಹಜ ಅಲಂಕಾರವಾಗಿ ಆಕರ್ಷಣೀಯವಾಗಿತ್ತು. 'ಕೊಡಗಿನ ಹಕ್ಕಿಗಳು' ಲೇಖನ ಮಳೆಯಲ್ಲೇ ಕೊಡಗನ್ನು ಒಂದು ಸುತ್ತು ಸುತ್ತಿಸಿ ತಂದಿತು. ಆದರೆ ಲೇಖನದಲ್ಲೆಲ್ಲೂ ಮುಖಪುಟದ ಹಕ್ಕಿಯ ಮಾಹಿತಿಯೇ ಇರಲಿಲ್ಲ. ಹಾಗಾಗಿ ಹಕ್ಕಿಯ ಹೆಸರು, ಅದರ ಛಾಯಾಚಿತ್ರಕಾರರ ಹೆಸರನ್ನೂ ಪ್ರಕಟಿಸಿದ್ದರೆ ಉತ್ತಮವಾಗಿರುತ್ತಿತ್ತು.

–ವಿಜಯಕುಮಾರ್ ಎಚ್.ಜಿ., ಬೆಂಗಳೂರು

### ಚಿತ್ರ ತಪ್ಪಾಗಿದೆ

ಮುಖಪುಟದ ಹಕ್ಕಿ ಚಿತ್ರ ಯೂರೋಪಿಯನ್ ನೊಣಬಾಕ. ಇದು ಇದುವರೆಗೂ ಕೊಡಗಿನಲ್ಲಿ ಕಂಡು ಬಂದಿಲ್ಲ. ಕೊಡಗಿನಲ್ಲಿ ಕಂಡುಬರುವುದು ಬೀ ಈಟರ್ಸ್ (ಕಳ್ಳಿಪೀರ) ಮಾತ್ರ.

ಯೂರೋಪಿಯನ್ ನೊಣಬಾಕದ ಗುಂಪೊಂದು ದಕ್ಷಿಣ ಯೂರೋಪ್‌ನಿಂದ ದಕ್ಷಿಣ ಶ್ರೀಲಂಕಾದಲ್ಲಿ ಚಳಿಗಾಲ ಕಳೆಯಲು ವಲಸೆ ಹೋಗುವ ಮತ್ತು ಬರುವ ಸಮಯದಲ್ಲಿ ಕನ್ನಡನಾಡಿನ ಕನಕಪುರ, ಕೊಳ್ಳೇಗಾಲ, ಮಲೆಮಾದೇಶನ ಬೆಟ್ಟಸಾಲು, ತಮಿಳುನಾಡಿನ ಸೇಲಂ, ದಿಂಬಮ್, ಸತ್ಯಮಂಗಲದ ಬೆಟ್ಟ ಸಾಲಿನಲ್ಲಿ ಹೆಚ್ಚು ದಿನ ಕಳೆಯುತ್ತವೆ. ಆಶ್ಚರ್ಯವೆಂದರೆ, ಈ ಪ್ರದೇಶಗಳನ್ನು ಬಿಟ್ಟು ದೇಶದ ಇತರೆಡೆ ಇವುಗಳನ್ನು ಕಂಡ ದಾಖಲೆ ಇಲ್ಲ. ಅಲ್ಲದೆ ಈ ಹಕ್ಕಿ ಅತಿ ಕಡಿಮೆ ಸಂಖ್ಯೆಯಲ್ಲಿ ಕಾಶ್ಮೀರದ ಕಣಿವೆಯಲ್ಲಿ ಸಂತಾನಾಭಿವೃದ್ಧಿ ಮಾಡುತ್ತವೆಂದು ಸಲೀಂ ಅಲಿಯವರು ದಾಖಲಿಸಿದ್ದಾರೆ.

ಪ್ರಾಯಶಃ ಆಯ್ದ ಮುಖಪುಟದ ಚಿತ್ರ ಅದಲು ಬದಲಾಗಿರಬಹುದೆಂದು ಅನಿಸುತ್ತಿದೆ.

– ಎ.ಶಿವಪ್ರಕಾಶ್

ಹೌದು, ಬೀ ಈಟರ್ ಬದಲಿಗೆ ಯೂರೋಪಿಯನ್ ನೊಣಬಾಕದ ಚಿತ್ರ ತಪ್ಪು ತಿಳಿವಳಿಕೆಯಿಂದ ಪ್ರಕಟವಾಗಿದೆ. (– ಸಂ)

### ಉಪಯುಕ್ತ ಲೇಖನ

'ಆರೋಗ್ಯ' ಅಂಕಣದಲ್ಲಿ 'ನಿಮ್ಮ ಹೃದಯ ನಿಮ್ಮ ಕೈಯಲ್ಲಿ' ಉಪಯುಕ್ತ ಲೇಖನ.

–ವೈ.ಜಿ. ನರಸಿಂಹನ್, ಶಿವಮೊಗ್ಗ, ಬಾಳ್ಳುಪೇಟೆ ನೀಲಕಂಠಪ್ಪ, ಹಾಸನ

### ಲೇಖನ ಹಿಡಿಸಿತು

'ಹಸಿರು ಹಾವು ಬಾಣಂತನ' ಲೇಖನ ಮನೆಮಂದಿಗೆಲ್ಲಾ ಹಿಡಿಸಿತು. ನಮ್ಮ ತಾಯಿ ಅದನ್ನೋದಿ ಬಾಲ್ಯಕ್ಕೆ ಜಾರಿದರು. ಅವರು ಚಿಕ್ಕವರಿದ್ದಾಗ ಹೊಂಗೆಕಾಯಿ ಆರಿಸುತ್ತಾ ಹೀಗೆ ಮರದಿಂದ ಉದುರಿದ ಹಾವಿನ ಮರಿಗಳನ್ನು ನೋಡಿ ಹೆದರಿ ಓಡಿಹೋಗಿದ್ದರಂತೆ. ಹಸಿರು ಹಾವು ಈ ರೀತಿ ಮರಿಗಳನ್ನು ಹಾಕುತ್ತದೆಂದು ಈಗ ತಿಳಿದು ಆಶ್ಚರ್ಯಪಟ್ಟರು.

–ವಿ.ಕುಮಾರ್, ಬೆಂಗಳೂರು

### ಗಟ್ಟಿ ಕಥೆ

ವಿದ್ಯಾಶಂಕರ್ ಹರಪನಹಳ್ಳಿ 'ಕಮಲಿನಿ' ಕಥೆ ಬಹಳ ಚೆನ್ನಾಗಿತ್ತು. ಇದೊಂದು ಗಟ್ಟಿ ಕಥೆ ಎನ್ನಲು ಅಡ್ಡಿಯಿಲ್ಲ.

–ಎಚ್. ಆನಂದ್ ಕುಮಾರ್, ಚಿತ್ರದುರ್ಗ, ರಾಜಶೇಖರ ಹಾದಿಮನಿ, ಧಾರವಾಡ

### ರಾಜ್ಯಮಟ್ಟದ ಛಾಯಾಚಿತ್ರ ಸ್ಪರ್ಧೆ

ಸಾಗರ ಫೋಟೋಗ್ರಾಫಿಕ್ ಸೊಸೈಟಿಯು 35 ವರ್ಷದೊಳಗಿನವರಿಗಾಗಿ ರಾಜ್ಯಮಟ್ಟದ ಛಾಯಾಚಿತ್ರ ಸ್ಪರ್ಧೆ ಏರ್ಪಡಿಸಿದೆ. ಪ್ರವೇಶ ಶುಲ್ಕ ಇಲ್ಲ. ಪ್ರವೇಶ ಪತ್ರಕ್ಕಾಗಿ, ಸ್ವವಿಳಾಸ ಮತ್ತು ಮರು ಅಂಚೆ ಸ್ಟ್ಯಾಂಪ್ ಹಚ್ಚಿದ ಲಕೋಟೆ ಯನ್ನು ಈ ವಿಳಾಸಕ್ಕೆ ಕಳಿಸಿ. ಚಿತ್ರ ಕಳಿಸಲು ಕೊನೆಯ ದಿನ ನವೆಂಬರ್ 15.

ಕೆ. ಚಂದ್ರಶೇಖರ್, ಕಾರ್ಯದರ್ಶಿ, ಸಾಗರ ಫೋಟೋಗ್ರಾಫಿಕ್ ಸೊಸೈಟಿ, 'ಓಂಕಾರ ನಿಲಯ', ಅಣಲೇಕೊಪ್ಪ, ಸಾಗರ–577401, ಶಿವಮೊಗ್ಗ ಜಿಲ್ಲೆ. 9480280977. ದೂ: 08183–229243.

ಇ–ಮೈಲ್: spssagar2000@gmail.com